3) ಈ ಹುದ್ದೆಗಳನ್ನು ನಿಗದಿತ ಪ್ರಾಧಿಕಾರದ ಮೂಲಕ ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಆದಷ್ಟು ಬೇಗ ಕ್ರಮ ಜರುಗಿಸಲಾಗುವುದು.

ರಾಜ್ಯದ ಶಾಲಾ ಕಾಲೇಜುಗಳ ಆವರಣದಲ್ಲಿ ತಿಂಡಿ-ತಿನಿಸುಗಳ ಮಾರಾಟದ ನಿಯಂತ್ರಣ

2953 - ಕೆ.ಎನ್. ಸುಬ್ಬಾ ರೆಡ್ಡಿ (ಬಸವನಗುಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದ ಹಲವಾರು ಸರ್ಕಾರಿ ಹಾಗೂ ಖಾಸಗಿ ಶಾಲೆಗಳಿಗೆ ತಿಂಡಿ ತಿನಿಸುಗಳನ್ನು ಒದಗಿಸಲು ಅಂಗಡಿಗಳನ್ನು ಅನಧಿಕೃತವಾಗಿ ತೆಗೆದು ತತ್ಪರಿಣಾಮವಾಗಿ ಅನಾರೋಗ್ಯದ ಆಹಾರ ಸೇವನೆಯಿಂದ ಅಪ್ರಾಪ್ತ ವಯಸ್ಕರ ಆರೋಗ್ಯ ಹದಗೆಡುವ ಸಾಧ್ಯತೆ ಇರುವುದನ್ನು ಸರ್ಕಾರ ಗಮನಿಸಿದೆಯೇ?

2) ಇಂತಹ ಅಂಗಡಿಗಳನ್ನು ಎಲ್ಲೆಲ್ಲಿ ತೆರೆಯಲಾಗಿದೆ ಮತ್ತು ಅನಧಿಕೃತವಾದ ಅಂಗಡಿಗಳನ್ನು ಮುಚ್ಚಲು ಸರ್ಕಾರ ಕೈಗೊಂಡ ಕ್ರಮಗಳೇನು?

3) ಶಾಲೆಗಳ ಆವರಣದಲ್ಲಿ ಹೋಟಲ್ ಹಾಗೂ ಅಂಗಡಿಗಳನ್ನು (ಅನಧಿಕೃತವಾಗಿ) ಸ್ಥಾಪಿಸಲು ಕಾರಣರಾದವರ ಮೇಲೆ ಸಮಗ್ರ ಶಿಕ್ಷಣ ಕಾಯಿದೆಯಡಿಯಲ್ಲಿ ಕ್ರಮ ತೆಗೆದುಕೊಳ್ಳಲು ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆಯೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

1) ಗಮನಿಸಿದೆ.

2) ಸಾಮಾನ್ಯವಾಗಿ ನಗರ ಪ್ರದೇಶ, ಪಟ್ಟಣ ಪ್ರದೇಶ ಮತ್ತು ದೊಡ್ಡ ಗ್ರಾಮಗಳಲ್ಲಿರುವ ಶಾಲಾ ಕಾಲೇಜುಗಳಲ್ಲಿ ಇಂತಹ ಅಂಗಡಿಗಳು ತೆರೆದಿರುತ್ತಾರೆ. ಈ ಅಂಗಡಿಗಳಿಗೆ ಲೈಸನ್ಸ್ ನೀಡುವ ಪ್ರಾಧಿಕಾರಿಗಳಿಗೆ ಈ ಬಗ್ಗೆ ಪತ್ರ ಬರೆದು ಇಂತಹ ಅನಧಿಕೃತ ಅಂಗಡಿಗಳನ್ನು ಮುಚ್ಚಲು ಸೂಕ್ತ ಕ್ರಮ ತೆಗೆದುಕೊಳ್ಳಲು ಈಗಾಗಲೇ ತಿಳಿಸಿದೆ.

3) ನಿಯಮಗಳನ್ನು ರಚಿಸಲಾಗುತ್ತಿದೆ.

ಸರ್ಕಾರಿ ಆಸ್ಪತ್ರೆಗಳ ವೈದ್ಯ ಹುದ್ದೆಗಳು

2954 - Sri. Subba Reddy K.N. (Basavanagudi) : Will the Hon'ble Minister for Health & Family Welfare be pleased to state?

a) How many posts Doctors & ANMs are vacant in the Government Hopitals in the State?

b) What action has been taken by the Government to fill these vacant posts?